ಶ್ರೀ ವಿಜಯಕುಮಾರ ಶೆಟ್ಟಿ : ಸರ್ಕಾರ ಜಿಲ್ಲಾ ಪರಿಷತ್ತಿಗೆ ಕೊಟ್ಟರೆ ತೆರಿಗೆ ಕೊಡಬೇಕಾಗುತ್ತದೆ, ಅದನ್ನು ಕೊಡುವ ತಾಕತ್ತು ಆ ಜನರಿಗೆ ಇಲ್ಲ. ಮಾನ್ಯ ಅಧ್ಯಕ್ಷರೇ, ಪೊಲೀಸ್ ಇಲಾಖೆಯಿಂದ ಮೂಡಾಕ್ಕೆ ಲಕ್ಷಾಂತರ, ಕೋಟ್ಯಾಂತರ ರೂಪಾಯಿ ಬಾಕಿ ಇದೆ.

ಅಧ್ಯಕ್ಷರು : ಈಗ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ನೋಟೀಸ್ ಕಳುಹಿಸಿಕೊಡುತ್ತೇವೆಂದು ಹೇಳಿದ್ದಾರೆ, ತಾವು ಆಗ ಚರ್ಚೆ ಮಾಡಿ.

ಶ್ರೀ ವಿಜಯಕುಮಾರ ಶೆಟ್ಟಿ : ಅಲ್ಲಿ ಜನ ಬಂದಿದ್ದಾರೆ ಅವರನ್ನು ಖಾಲಿ ಮಾಡಿ ಎಂದು ಹೇಳುವುದಕ್ಕೆ. ಆದ್ದರಿಂದ, ಮಾನ್ಯ ಸಚಿವರು 5 ವರ್ಷ ಎಕ್ಸ್‌ಟೆನ್‌ಷನ್ ಮಾಡಲಿ ಆಮೇಲೆ ಬೇಕಾದರೆ ನಾವು ಅರ್ಧ ಗಂಟೆ ಕಾಲಾವಧಿಯ ಚರ್ಚೆ ಮಾಡೋಣ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಅವರಿಗೆ ತಪ್ಪು ತಿಳುವಳಿಕೆ ಆಗಿದೆ. ಅವರು ಖಾಲಿ ಮಾಡುವಂತಹ ಸಂದರ್ಭ ಇಲ್ಲ. ಇದು ಪುನರ್ವಸತಿ ಕಾಲೋನಿ. ಇದು ಕೆ.ಐ.ಡಿ.ಬಿ. ಕಾಲೋನಿಯಲ್ಲ. ಅಲ್ಲಿ ನಮ್ಮ ಕಂಟ್ರಾಕ್ಟರ್ಸ್ ಅದನ್ನು ಬಿಲ್ಡ್‌ಅಪ್ ಮಾಡಿ ಆಸ್ಪತ್ರೆ ಕಟ್ಟುತ್ತೇವೆ, ವೆಟರ್‌ನರಿ ಆಸ್ಪತ್ರೆಯನ್ನು ಕಟ್ಟುತ್ತೇವೆ, ವಾಟರ್ ಸಪ್ಲೈ ಮಾಡಿದ್ದೇವೆ. ಒಂದು ವೇಳೆ ಅಲ್ಲಿ ಇನ್ನೂ ಏನಾದರೂ ಕೊರತೆ ಇದ್ದರೆ ನಾನೇ ಸ್ವತಹಃ ಭೇಟಿ ನೀಡಿ ಪರಿಶೀಲನೆ ಮಾಡಿ ಮಾಡಿಕೊಡುತ್ತೇನೆ. ಇದನ್ನು ಜಿಲ್ಲಾ ಪರಿಷತ್ತಿಗೆ ವಹಿಸಿಕೊಡುವವರಿದ್ದೇವೆ.

ರಾಜ್ಯದಲ್ಲಿ ಸಣ್ಣ ನೀರಾವರಿ ಕೆರೆಗಳು

95 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ರಾಜ್ಯದಲ್ಲಿ ಸಣ್ಣ ನೀರಾವರಿ ಕೆರೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)*

2) *ಸಣ್ಣ ಕೆರೆಗಳ ದುರಸ್ತಿ ಮತ್ತು ಹೂಳೆತ್ತುವ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಯಾವುವು?*

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

1. ಒಟ್ಟು 36,661 ಕೆರೆಗಳು ಜಿಲ್ಲಾವಾರು ವಿವರ ಅನುಬಂಧ -1ರಲ್ಲಿದೆ.

2. 98-99ರ ಸಾಲಿನಲ್ಲಿ ರೈತರ ಸಹಯೋಗದಿಂದ ಹೂಳೆತ್ತುವ ಯೋಜನೆ ರೂಪಿಸಿದೆ. 98-99ರ ಸಾಲಿನಲ್ಲಿ ಕೆರೆಗಳ ಒಳಪಟ್ಟಿದ್ದು ಸುಧಾರಣೆ ಅಡಿಯಲ್ಲಿ 1000.00 ಲಕ್ಷಗಳನ್ನು 99-2000ರ ಸಾಲಿನಲ್ಲಿ 600.00 ಲಕ್ಷ ರೂ.ಗಳು ಪ್ರತ್ಯೇಕವಾಗಿ ಹೂಳೆತ್ತಲು) ಅನುದಾನದಲ್ಲಿ ಒದಗಿಸಲಾಗಿದೆ. ಅಂತೆಯೇ ಮುಂದಿನ ವರ್ಷಗಳಲ್ಲಿ ಕೂಡ ಅನುದಾನ ಲಭ್ಯತೆ ಅನುಸರಿಸಿ ಕೆರೆಗಳ ಹೂಳೆತ್ತುವ ಕಾರ್ಯಕ್ರಮ ರೂಪಿಸಲಾಗುವುದು, ಅಲ್ಲದೆ 5 ವರ್ಷಗಳಲ್ಲಿ 5000 ಕೆರೆಗಳ ಹೂಳನ್ನು ತೆಗೆಯುವ ಗುರಿ ಹೊಂದಿದ್ದು ಈ ಬಗ್ಗೆ ವಿಶ್ವಬ್ಯಾಂಕ್‌ನಿಂದ 1000 ಕೋಟಿ ರೂ ಸಾಲ ಪಡೆಯುವ ನಿಟ್ಟಿನಲ್ಲಿ ಸಮಗ್ರ ಯೋಜನೆಯನ್ನು ರೂಪಿಸುವ ಪ್ರಸ್ತಾವನೆ ಸರ್ಕಾರದಲ್ಲಿದೆ.

ಅನುಬಂಧ - 1

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಕೆರೆಗಳ ಸಂಖ್ಯೆ
1.	ಗುಲ್ಬರ್ಗಾ	516
2.	ಬೀದರ್	93
3.	ರಾಯಚೂರು	605
4.	ಕೊಪ್ಪಳ	66
5.	ಬಳ್ಳಾರಿ	268
6.	ಬೆಳಗಾಂ	814
7.	ಬಿಜಾಪುರ	87
8.	ಬಾಗಲಕೋಟೆ	49
9.	ಧಾರವಾಡ	1011
10.	ಗದಗ	27
11.	ಹಾವೇರಿ	2122
12.	ಉತ್ತರ ಕನ್ನಡ	3277
13.	ಬೆಂಗಳೂರು ನಗರ	559
14.	ಬೆಂಗಳೂರು ಗ್ರಾಮಾಂತರ	1529
15.	ಮಂಡ್ಯ	965
16.	ತುಮಕೂರು	2010
17.	ಮಂಗಳೂರು (ದಕ್ಷಿಣ ಕನ್ನಡ)	679
18.	ಉಡುಪಿ	
19.	ಕೊಡಗು	1146
20.	ಹಾಸನ	5609
21.	ಕೋಲಾರ	4286
22.	ಮೈಸೂರು	1374
23.	ಚಾಮರಾಜನಗರ	
23.	ಶಿವಮೊಗ್ಗ	6331
24.	ಚಿತ್ರದುರ್ಗ	372
25.	ಚಿಕ್ಕಮಗಳೂರು	2866
	ಒಟ್ಟು	**36,661** ಕೆರೆಗಳು

ಶ್ರೀ ಅರಗಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ನನಗೆ ಕೊಟ್ಟಿರುವ ಉತ್ತರದಲ್ಲಿ ರಾಜ್ಯದಲ್ಲಿ ಸಣ್ಣ ನೀರಾವರಿ ಕೆರೆಗಳು ಎಷ್ಟು ಇವೆ ಎಂದು ನಾನು ಕೇಳಿದ್ದೇನೆ, ಅದಕ್ಕೆ ಮಾನ್ಯ ಮಂತ್ರಿಗಳು 36, 661 ಕೆರೆಗಳು ಎಂದು ಹೇಳಿದ್ದಾರೆ. ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಭಾಷಣದಲ್ಲಿ 55 ಸಾವಿರ ಕೆರೆಗಳು ಎಂದು ಹೇಳಿದ್ದಾರೆ. ಇದರಲ್ಲಿ ಯಾವುದು ಸರಿ ಎಂದು ಹೇಳಬೇಕು. ಆಮೇಲೆ 1998-99ರಲ್ಲಿ ಈ ಒಂದು ಹೂಳು ಎತ್ತುವ ಕಾರ್ಯಕ್ರಮಕ್ಕೋಸ್ಕರ ಒಂದು ಸಾವಿರ ಲಕ್ಷ ರೂಪಾಯಿಗಳ ಅನುದಾನವನ್ನು ಇಟ್ಟಿದ್ದರು. 1999-2000 ಇಸವಿಯಲ್ಲಿ ಸುಮಾರು 600 ಲಕ್ಷ ರೂಪಾಯಿಗಳ ಅನುದಾನ ಇಟ್ಟಿದ್ದರು. ಇಷ್ಟು ಅನುದಾನದಲ್ಲಿ ಈಗ ಎಷ್ಟು ಕೆರೆಗಳ ಹೂಳು ಎತ್ತಲಾಗಿದೆ.

ಶ್ರೀ ಕುಮಾರ ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಅವರು ಕೇಳಿರತಕ್ಕಂಥ ಮೊದಲನೆ ಪ್ರಶ್ನೆಗೆ ಉತ್ತರವಾಗಿ 36,661 ಕೆರೆಗಳು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರತಕ್ಕಂಥಾದ್ದು. ಮಾನ್ಯ ಮುಖ್ಯಮಂತ್ರಿಗಳು ಹೇಳಿರತಕ್ಕಂಥ 50 ಸಾವಿರ ಕೆರೆಗಳು ಏನು ಇವೆ ಅವುಗಳು ಈಗ ಜಿಲ್ಲಾ ಪರಿಷತ್ತಿನ ಕೆರೆಗಳು ಇವೆ. ಇನ್ನೂ ಬೇರೆ ಕೆರೆಗಳು ಇವೆ, ಅವೆಲ್ಲಾ ಸೇರಿ ಬಹಳಷ್ಟು ಕೆರೆಗಳು ಇವೆ. ಅದರಲ್ಲಿ ಇನ್ನೂ ಕೆಲವು ಕೆರೆಗಳು ಸರ್ವೆ ಮಾಡದೇ ಸರ್ಕಾರದ ಗಮನಕ್ಕೆ ಬಾರದೇ ಇರುವಂತಹ ಕೆರೆಗಳು ಸಹ ಇವೆ. ಆದ್ದರಿಂದ, ಸರ್ಕಾರ ಈಗ ಈ ಕೆರೆಗಳ ಸರ್ವೆ ಕೆಲಸವನ್ನು ಮಾಡುತ್ತಿದ್ದೆ. ಸರ್ವೆ ಮಾಡಿದ ಮೇಲೆ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಇಷ್ಟು ಕೆರೆಗಳು ಇವೆ. ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯಲ್ಲಿ ಇಷ್ಟು ಕೆರೆಗಳು ಇವೆ ಎನ್ನುವ ಮಾಹಿತಿಯನ್ನು ನಾನು ಆಮೇಲೆ ಕೊಡುತ್ತೇನೆ. ತಾವು ಕೇಳಿರತಕ್ಕಂಥ ಎರಡನೆ ಪ್ರಶ್ನೆಗೆ ಉತ್ತರವಾಗಿ ಹೇಳುವುದಾದರೆ 600 ಲಕ್ಷ ರೂಪಾಯಿಗಳು ಈಗಾಗಲೇ ಖರ್ಚಾಗಿದೆ ತಾವು ಎಲ್ಲೆಲ್ಲಿ ಯಾವ ಯಾವ ಕೆರೆಗಳ ಹೂಳು ಎತ್ತುವ ಕೆಲಸ ಮಾಡಿದ್ದೀರಿ ಎಂದು ಕೇಳಿದ್ದೀರಿ, ಅದರ ಸಂಪೂರ್ಣವಾದ ಮಾಹಿತಿ ಈಗ ಸಧ್ಯದಲ್ಲಿ ನನ್ನ ಹತ್ತಿರ ಇಲ್ಲ. ನಾನು ಜಿಲ್ಲಾವಾರು ಮತ್ತು ತಾಲ್ಲೂಕುವಾರು, ಇಂತಿಂತಹ ಕಡೆಗಳಲ್ಲಿ ಈ ಕೆರೆಗಳ ಕಾಮಗಾರಿಗಳನ್ನು ಮಾಡಿದ್ದೇವೆ ಎನ್ನತಕ್ಕಂಥ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ನಾನು ಕಳುಹಿಸಿಕೊಡುತ್ತೇನೆ.

ಶ್ರೀ ಅರಗಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಹೇಳಿದ ಹಾಗೆಯೇ ಅನೇಕ ಕೆರೆಗಳು ಜಿಲ್ಲಾ ಪರಿಷತ್ತು, ಮತ್ತು ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ ಹಾಗೂ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಒಳಪಡದೇ ಇರುವಂತಹ ಕೆರೆಗಳು ಬಹಳಷ್ಟು ಇವೆ. ಅವು ತುಂಬಾ ದೊಡ್ಡ ದೊಡ್ಡ ಕೆರೆಗಳು. ಅವು ಸಾಮಾನ್ಯ ರೈತರಿಗೆ ಬಹಳಷ್ಟು ಸಹಾಯಕವಾಗುವಂತಹ ಕೆರೆಗಳು. ಜಿಲ್ಲಾ ಪರಿಷತ್ತು ಮತ್ತು ತಾಲ್ಲೂಕು ಪಂಚಾಯಿತಿಗಳು ಒಂದು ಕೆರೆಯ ಕೆಲಸವನ್ನು ಸಹ ಮುಟ್ಟುವುದಿಲ್ಲ. ಆ ಎಲ್ಲಾ ಕೆರೆಗಳನ್ನು ಸಹ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ವಹಿಸಿ, ಅವುಗಳನ್ನು ಹಂತಹಂತವಾಗಿ ಮಾಡಬೇಕು, ಉದಾಹರಣೆಗೆ ಈಗ ತೂಬು ಒಡೆದು ಹೋಗಿದೆ, ಕೋಡಿ ಹೋಗಿದೆ ಅವುಗಳನ್ನು ರಿಪೇರಿ ಮಾಡುತ್ತಿಲ್ಲ. ರಾಜಮಹಾರಾಜರುಗಳ ಕಾಲದಿಂದ ಇರತಕ್ಕಂಥ ಕೆರೆಗಳು. ಅವುಗಳನ್ನು ಯಾರೂ ಮುಟ್ಟಲಿಕ್ಕೆ ಹೋಗಿಲ್ಲ. ಆ ಅಚ್ಚುಕಟ್ಟು

ಪ್ರದೇಶದ ರೈತರು ಕಂದಾಯ ಕಟ್ಟುತ್ತಿದ್ದಾರೆ, ತೆರಿಗೆಯನ್ನು ಕಟ್ಟುತ್ತಿದ್ದಾರೆಯೇ ವಿನಹಃ ಅದರಿಂದ ಆ ರೈತರಿಗೆ ಏನೂ ಆಗುತ್ತಿಲ್ಲ. ಆ ಕೆರೆಗಳನ್ನು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಂಡು, ಈಗ ಸರ್ಕಾರ ಬೇರೆಬೇರೆ ಯೋಜನೆಗಳ ಮೂಲಕ ಎಲ್ಲಾ ಕೆರೆಗಳ ಹೂಳು ಎತ್ತುತ್ತೇವೆ ಎನ್ನತಕ್ಕಂಥಾ ಮಾತನ್ನು ಹೇಳುತ್ತಿದ್ದಾರೆ. ಎಲ್ಲಿಂದ ಆದರೂ ಸಾಲ ತಂದು ಆದರೂ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಆ ರೀತಿಯ ಕಾರ್ಯ ಯೋಜನೆಯ ವ್ಯಾಪ್ತಿಯಲ್ಲಿ ಈ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಕೆರೆಗಳನ್ನು ಸೇರಿಸಿಕೊಳ್ಳುತ್ತೀರಾ? ನಿನ್ನೆಯ ದಿವಸ ಮಾನ್ಯ ಮಂತ್ರಿಗಳು 5 ವರ್ಷಗಳಲ್ಲಿ 5 ಸಾವಿರ ಕೆರೆಗಳನ್ನು ಹೂಳು ಎತ್ತುವ ಕೆಲಸವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ನಿನ್ನೆಯ ದಿವಸ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ 5 ವರ್ಷಗಳಲ್ಲಿ 25 ಸಾವಿರ ಕೆರೆಗಳನ್ನು ನಾವು ಕನಿಷ್ಟ ಹೂಳು ಎತ್ತುವ ಕೆಲಸಕ್ಕೆ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಇದು ಒಂದಕ್ಕೊಂದು ವ್ಯತ್ಯಾಸ ಇದೆ. ಆದ್ದರಿಂದ ನನಗೆ ನಿರ್ದಿಷ್ಟವಾದ ಉತ್ತರ ಕೊಡಿ. 5 ವರ್ಷಗಳಲ್ಲಿ 25 ಸಾವಿರ ಕೆರೆಗಳ ಹೂಳು ಎತ್ತುವ ಕೆಲಸ ಮಾಡುತ್ತೀರಾ ಅಥವಾ 5 ವರ್ಷಗಳಲ್ಲಿ 5 ಸಾವಿರ ಕೆರೆಗಳ ಹೂಳು ಎತ್ತುವ ಕೆಲಸ ಮಾಡುತ್ತೀರಾ?

ಶ್ರೀ ಕುಮಾರ ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, 5 ಸಾವಿರ ಕೆರೆಗಳು ಅಂದರೆ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರತಕ್ಕಂಥ ಕೆರೆಗಳು, 5 ಸಾವಿರ ಕೆರೆಗಳು ಎಂದು ಹೇಳಿ ಅದನ್ನು ಬಿಟ್ಟುಬಿಟ್ಟು, ಸನ್ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ 5 ಸಾವಿರ ಕೆರೆಗಳು ಅಂದರೆ ತಾಲ್ಲೂಕು ಪಂಚಾಯಿತಿ ಕೆರೆಗಳು ಇರಬಹುದು, ಜಿಲ್ಲಾ ಪರಿಷತ್ತು ಕೆರೆಗಳು ಇರಬಹುದು, ಎಲ್ಲಾ ಕೆರೆಗಳು ಸೇರಿ ಸಂಪೂರ್ಣವಾಗಿ, ಯಾವುದೇ ರೀತಿಯಲ್ಲಿ ವಿಂಗಡಣೆ ಮಾಡದೇ 5 ಸಾವಿರ ಕೆರೆಗಳನ್ನು ಒಂದು ವರ್ಷಕ್ಕೆ ತೆಗೆದುಕೊಳ್ಳತಕ್ಕಂಥಾ ಕಾರ್ಯಕ್ರಮ. ಇದರಲ್ಲಿ ಜಿಲ್ಲಾ ಪರಿಷತ್ತು ಕೆರೆಗಳು ಇರಬಹುದು, ಸಣ್ಣ ನೀರಾವರಿ ಇಲಾಖಾ ವ್ಯಾಪ್ತಿಯಲ್ಲಿ ಬರತಕ್ಕಂಥ ಕೆರೆಗಳು ಇರಬಹುದು, ಈ ರೀತಿ 5 ಸಾವಿರ ಕೆರೆಗಳು ಸಣ್ಣ ನೀರಾವರಿ ಇಲಾಖೆಯ ಕೆರೆಗಳು, ಉಳಿದಿರತಕ್ಕಂಥಾದ್ದು ವರ್ಷ ವರ್ಷ ಬರತಕ್ಕಂಥಾದ್ದು ಎಲ್ಲಾ ಸೇರಿ ವರ್ಷಕ್ಕೆ ಬರತಕ್ಕಂಥಾ ಕೆರೆಗಳು ಎಂದು ಕೊಟ್ಟಿದ್ದಾರೆ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು 36,661 ಕೆರೆಗಳು ಎಂದು ಕೊಟ್ಟಿದ್ದಾರೆ. ಬಹುತೇಕ 36,661 ಕೆರೆಗಳು ಇರುವುದಿಲ್ಲ. ಇದರಲ್ಲಿ ಕೆಲವು ಕೆರೆಗಳು ಮುಚ್ಚಿಹೋಗಿ ಅದು ಆಗಲೇ ಸಾಗುವಳಿಯಾಗಿದೆ. ಮಲೆನಾಡು ಪ್ರದೇಶದಲ್ಲಿ ಈಗಾಗಲೇ ಸುಮಾರು ಕೆರೆಗಳು ಮುಚ್ಚಿಹೋಗಿ ಮರಗಿಡಗಳನ್ನು ಬೆಳೆದಿದ್ದಾರೆ. ಆದ್ದರಿಂದ, ಈಗ ಹೊಸ ಕೆರೆಗಳನ್ನು ತೆಗೆಯುವಂತಹ ಉದ್ದೇಶ ಸರ್ಕಾರಕ್ಕೆ ಏನಾದರೂ ಇದೆಯೇ?

ಶ್ರೀ ಕುಮಾರ ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಹೊಸ ಕೆರೆಗಳ ನಿರ್ಮಾಣ ಕಾರ್ಯ ಈಗಾಗಲೇ ನಡೆಯುತ್ತಿದೆ. ಮಾನ್ಯ ಶಾಸಕರು ಅಥವಾ ಜನರು ಯಾವುದಾದರೂ ಇಂತಹ ಜಾಗದಲ್ಲಿ ಹೊಸ ಕೆರೆ ನಿರ್ಮಾಣ ಮಾಡಬೇಕೆನ್ನುವ ಪ್ರಸ್ತಾವನೆಯನ್ನು ಕಳುಹಿಸಿದರೆ ತಕ್ಷಣ ತೆಗೆದುಕೊಳ್ಳುವುದಕ್ಕೆ ಯಾವುದೇ ಕೊರೆತ ಇಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೇ, ಈ ಕೆರೆಗಳ ಹೂಳು ಎತ್ತುವುದು ತುಂಬಾ ಅಗತ್ಯ ಇದೆ. ಸಣ್ಣ ಮತ್ತು ದೊಡ್ಡ ರೈತರ ದೃಷ್ಟಿಯಿಂದ. ಇದು ಬಹಳ ಅಗತ್ಯವಾಗಿರತಕ್ಕಂಥಾದ್ದು. ಆದರೆ ಇದು ರಾಜ್ಯದ ಎಲ್ಲಾ ಭಾಗದಲ್ಲಿಯೂ ಆಗಬೇಕೆನ್ನುವುದು ನನ್ನ ಅಪೇಕ್ಷೆ. ಈ ಹಿಂದೆ ಏನಾಗಿದೆ ಎಂದರೆ ಕೆಲವೇ ಜಿಲ್ಲೆಗಳನ್ನು ಆಯ್ಕೆ ಮಾಡಿ ಅಲ್ಲಿಗೆ ಫ್ರೊಕ್ಲೈನರ್‌ನ್ನು ಕಳುಹಿಸುವುದು, ನಾನು ಕೋಲಾರ ಜಿಲ್ಲೆ ಎಂದು ಹೇಳುವುದಕ್ಕೆ ಬಯಸುವುದಿಲ್ಲ. ಬೇರೆ ಬೇರೆ ಜಿಲ್ಲೆಗಳು ಇರಬಹುದು, ಆದರೆ ಕೆಲವು ಜಿಲ್ಲೆಗಳಿಗೆ ಮಾತ್ರ ವಿಶೇಷವಾದ ಆದ್ಯತೆಯನ್ನು ಕೊಟ್ಟು ಹೂಳನ್ನು ಎತ್ತಿದ್ದಾರೆ. ಆದರೆ ಮಲೆನಾಡಿನಂತಹ ಜಿಲ್ಲೆಗಳಲ್ಲಿ ಕೆರೆ ಹೂಳು ಎತ್ತಿದ್ದೆ ಇಲ್ಲ. ಹಾಗಾಗಿ ಎಲ್ಲಾ ಜಿಲ್ಲೆಗಳಿಗೂ ಆ ರೀತಿಯಾದಂತಹ ಆದ್ಯತೆಯನ್ನು ಕೊಡಬೇಕು. ಕೆಲವು ಜಿಲ್ಲೆಗಳಿಗೆ ಮಾತ್ರ ಒತ್ತು ಎನ್ನುವಂಥಾದ್ದು ಸರ್ಕಾರದಲ್ಲಿ ಆಗಬಾರದು. ಎರಡನೆಯದು ಕೆರೆಗಳ ಹೂಳು ಎತ್ತುವ ಕಾರ್ಯದಲ್ಲಿ ದೊಡ್ಡ ಪ್ರಮಾಣದಲ್ಲಿ ಅವ್ಯವಹಾರ ಮತ್ತು ಭ್ರಷ್ಟಾಚಾರ ನಡೆದಿದೆ ಎನ್ನತಕ್ಕಂಥ ವರದಿಗಳು ಬೇರೆ ಬೇರೆ ಪತ್ರಿಕೆಗಳಲ್ಲಿ ಬಂದಿದೆ. ಮಾನ್ಯ ಮಂತ್ರಿಗಳು ಈ ಇಲಾಖೆಯಲ್ಲಿ ಬಹಳ ಉತ್ಸಾಹದಿಂದ ಕೆಲಸ ಮಾಡುತ್ತಿದ್ದಾರೆ ಈ ರೀತಿಯ ಅವ್ಯವಹಾರಗಳ ಬಗ್ಗೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದಾರೆಂದು ಸಹ ಪತ್ರಿಕೆಗಳಲ್ಲಿ ಬಂದಿದೆ. ಅದನ್ನು ಮುಂದುವರಿಸಬೇಕು ಮತ್ತು ಎಲ್ಲಾ ಜಿಲ್ಲೆಗಳಿಗೂ ಆದ್ಯತೆ ನೀಡಬೇಕೆಂದು ನಾನು ಆಗ್ರಹ ಮಾಡುತ್ತೇನೆ. ಯಾವುದೇ ಒತ್ತಡಕ್ಕೆ ಸಿಗದ ಬಲವಾದ ಕ್ರಮಗಳನ್ನು ಈ ಬಗ್ಗೆ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯಿಸುತ್ತೇನೆ.

ಶ್ರೀ ಪಿ. ರಮೇಶ್ : ರಾಜ್ಯದಲ್ಲಿನ ಕೆರೆಗಳ ಹೂಳೆತ್ತುವುದಕ್ಕೆ ಸಾಕಷ್ಟು ಯೋಜನೆಗಳನ್ನು ರೂಪಿಸುವುದರ ಬಗ್ಗೆ ಬಹಳಷ್ಟು ಚಿಂತನೆಯು ನಡೆಯುತ್ತಾ ಇದೆ. ಆದರೆ ಕೆರೆಗಳಿಗೆ ನೀರು ಸಾಕಷ್ಟು ಬರುತ್ತಾ ಇಲ್ಲ ಎನ್ನುವ ಬಗ್ಗೆ ನೀರು ಬರುವ ಹಾಗೆ ಯೋಜನೆಗಳನ್ನು ಮಾಡಿದರೆ, ತುಂಬಾ ಅನುಕೂಲವಾಗುತ್ತದೆ. ನೀರು ಶೇಖರಣೆಯಾದ ಮೇಲೆ ಹೂಳೆತ್ತುವ ಕೆಲಸವು ನಡೆಯುತ್ತಿರಲಿ. ಹೂಳೆತ್ತುವ ಕೆಲಸಕ್ಕೆ ಸಾವಿರಾರು ಕೋಟಿ ರೂಪಾಯಿಗಳ ಯೋಜನೆಯನ್ನು ಹಾಕುವುದರ ಜೊತೆಗೆ ಎಷ್ಟೋ ವರ್ಷಗಳಿಂದ ಮಧ್ಯ ಕರ್ನಾಟಕದ ಕೆಲವು ಭಾಗಗಳಲ್ಲಿ ಕೆರೆಗಳಿಗೆ ನೀರೇ ಬರುತ್ತಾ ಇಲ್ಲ ಎನ್ನುವ ಸ್ಥಿತಿ ನಿರ್ಮಾಣವಾಗಿದೆ. ಇದರಿಂದ ರೈತರುಗಳು ಸಾಕಷ್ಟು ನೋವನ್ನು ಅನುಭವಿಸುತ್ತಾ ಇದ್ದಾರೆ. ಹೂಳೆತ್ತುವ ಕೆಲಸಕಾರ್ಯಗಳ ಜೊತೆಗೆ ನೀರು ಬರುವ ವಿಚಾರಕ್ಕೂ ಗಮನ ಕೊಡಬೇಕಾಗುತ್ತದೆ. ಮಲೆನಾಡಿನವರು ನೀರು ತುಂಬಿದ ಬಗ್ಗೆ ಹೂಳೆತ್ತುವ ಬಗ್ಗೆ ವಿಚಾರ ಮಾಡಿದ್ದಾರೆ, ನೀರಾವರಿ ಇರುವ ಜಾಗಗಳವರು ನೀರು ಬಂದು ಬಂದು ಹೂಳು ತುಂಬಿಕೊಂಡಿದೆ ಎನ್ನುತ್ತಾರೆ. ಆದರೆ ನಮ್ಮ ಮಧ್ಯಭಾಗಗಳಾದ ಚಿತ್ರದುರ್ಗ ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆಯ ಕೆಲವು ಭಾಗಗಳು, ತುಮಕೂರು ಜಿಲ್ಲೆಯ ಕೆಲವು ಭಾಗಗಳ ಕೆರೆಗಳಿಗೆ ನೀರು ಬರುವಂಥ ಯೋಜನೆಗಳನ್ನೇ ಮಾಡಿಲ್ಲ. ಆದ್ದರಿಂದ ಅಲ್ಲಿಗೆ ನೀರು ಯಾವರೀತಿಯಲ್ಲಿ ಬರಬೇಕೆನ್ನುವ ಬಗ್ಗೆ ಯೋಚನೆ ಮಾಡಬೇಕು, ಅದು ಸಣ್ಣ ನೀರಾವರಿ ಇರಬಹುದು, ಬೃಹತ್ ನೀರಾವರಿಯೇ ಇರಬಹುದು. ಆ ಕುರಿತು ತಾವುಗಳು ದಯಮಾಡಿ ಚಿಂತನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ವಿಶ್ವೇಶ್ವರ ಹೆಗಡೆಯವರು ಹೇಳಿದ ಮೊದಲನೆ ಪ್ರಶ್ನೆಗೆ ಹೇಳುವುದಾದರೆ, ಕೋಲಾರ ಜಿಲ್ಲೆಯಲ್ಲಿ ಹೊಳೆತ್ತುವ ಕಾರ್ಯಕ್ರಮಗಳಿಗೆ ಹೆಚ್ಚು ಒತ್ತು ಕೊಟ್ಟು ಮಾಡಿದ್ದೀರಿ, ಉಳಿದಂತೆ ಮಲೆನಾಡು ಪ್ರದೇಶಗಳಲ್ಲಿ ಅಚ್ಚುಕಟ್ಟಾಗಿ ಮಾಡಿಲ್ಲ ಎಂಬ ಅವರ ವಾದ ಇದೆ. ಕೋಲಾರ ಜಿಲ್ಲೆಯಲ್ಲಿ ಮತ್ತಿತರ ಕೆಲವು ಭಾಗಗಳಲ್ಲಿ ಈ ಕಾರ್ಯಕ್ರಮವು ರೈತರ ಸಹಕಾರದಿಂದ ನಡೆದಿರುತ್ತದೆ. ಕೋಲಾರ ಜಿಲ್ಲೆಯಲ್ಲಿ ಆ ಕಾರ್ಯಕ್ರಮದ ಯಶಸ್ಸು ಮಾನ್ಯ ಬೈರೇಗೌಡರಿಗೂ ಸಲ್ಲಬೇಕಾಗುತ್ತದೆ. ಏಕೆಂದರೆ, ಅವರು ಇದಕ್ಕೆ ಒತ್ತು ಕೊಟ್ಟು ಜನಗಳನ್ನು ಸೇರಿಸಿಕೊಂಡು ಅವರುಗಳ ಸಂಪೂರ್ಣವಾದ ಸಹಕಾರದಿಂದ ಹೂಳೆತ್ತುವ ಕಾರ್ಯಕ್ರಮವನ್ನು ಮಾಡಿದ್ದಾರೆ. ಎಲ್ಲೆಲ್ಲಿ ಶಾಸಕರು ಸ್ವತಃ ಈ ಕುರಿತು ಆಸಕ್ತಿ ವಹಿಸಿ ಒತ್ತನ್ನು ಕೊಟ್ಟು ಅಲ್ಲಿನ ರೈತರುಗಳ ಸಹಕಾರವನ್ನು ಪಡೆದುಕೊಂಡು ಈ ಕಾರ್ಯಕ್ರಮವನ್ನು ಮಾಡಿದ್ದಾರೋ ಅಲ್ಲೆಲ್ಲಾ ಇದು ಯಶಸ್ವಿಯಾಗಿದೆ. ಬೇರೆ ಬೇರೆ ಕಡೆಗಳಲ್ಲಿ ಇದು ಆಗಿದೆ. ಆದರಲ್ಲೂ ಕೋಲಾರ ಜಿಲ್ಲೆಯಲ್ಲಿ ಇದು ಹೆಚ್ಚು ಯಶಸ್ಸನ್ನು ಕಂಡಿದೆ. ಮಾನ್ಯ ಸದಸ್ಯರು ಈ ಬಗ್ಗೆ ಉಳಿದ ಕಡೆಗಳಲ್ಲಿ ಒತ್ತು ಕೊಟ್ಟಿಲ್ಲ ಎಂಬ ಭಾವನೆಯಿಂದ ಮಾತನಾಡಿದ್ದಾರೆ. ಆ ವಿಚಾರದಲ್ಲಿ ತಾವುಗಳು ಕೂಡ ರೈತರುಗಳ ಸಹಕಾರದಿಂದ ಈ ಕಾರ್ಯಕ್ರಮವನ್ನು ಮಾಡಲು ಮುಂದಿದ್ದೇವೆ ಎನ್ನುವುದಾದರೆ ಈ ಕೆಲಸವನ್ನು ತಮ್ಮ ಕಡೆಗಳಲ್ಲಿಯೂ ಮಾಡಬಹುದು. ನಮ್ಮ ಎಲ್ಲಾ ಶಾಸಕ ಮಿತ್ರರುಗಳಲ್ಲಿ ನನ್ನ ವಿನಂತಿ ಏನೆಂದರೆ, ಇದಕ್ಕೆ ರೈತರುಗಳ ಸಹಕಾರವು ಬಹಳ ಮುಖ್ಯವಾಗಿರುವುದರಿಂದ, ಸರಕಾರದಿಂದ ಬರುವ ಹಣವನ್ನು ಪಡೆದುಕೊಂಡು ಈ ಕೆಲಸವನ್ನು ಮಾಡಬೇಕಾಗುತ್ತದೆ. ಇವೊತ್ತು ಈಗಾಗಲೇ ನೀರಿಗಾಗಿ ಪರದಾಟವು ಆರಂಭವಾಗಿದೆ. ತಾವುಗಳು ಆ ಕಾರ್ಯಕ್ರಮವನ್ನು ಶುರು ಮಾಡುತ್ತೇವೆ ಎನ್ನುವುದಾದರೆ ನಾವು ಇವೊತ್ತಿಗೂ ಕೂಡ ಸಹಕಾರ ನೀಡಲು ಸಿದ್ಧರಾಗಿದ್ದೇವೆ. ಹೂಳೆತ್ತುವ ಕಾರ್ಯಕ್ರಮವನ್ನು ನಾವು ತಕ್ಷಣ ಮುಂದುವರಿಸಿಕೊಂಡು ಹೋಗಬಹುದಾಗಿದೆ. ಅದೇ ರೀತಿಯಲ್ಲಿ ಹೂಳೆತ್ತುವ ಕಾರ್ಯಕ್ರಮದಲ್ಲಿ ಸಾಕಷ್ಟು ಅವ್ಯವಹಾರಗಳು ನಡೆದಿವೆ ಎಂಬ ಮಾತನ್ನು ಹೇಳಿದ್ದಾರೆ. ತಾವುಗಳು ಹೇಳಿದಂತೆ ಕೆಲವು ಕಡೆಗಳಲ್ಲಿ ಹಾಗೆ ಆಗಿರುವುದು ನಿಜ. ಅದನ್ನು ಗುರುತಿಸಿ ಸಂಬಂಧಪಟ್ಟವರ ಮೇಲೆ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ. ಎಲ್ಲೆಲ್ಲಿ ಸುಮಾರು ಐದು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಕೆಲಸ ಇರುವುದು ಅಂದರೆ ಸುಮಾರು ಒಂದು ಲಕ್ಷದ ರೂಪಾಯಿಗಳ ಕೆಲಸವನ್ನು ಕೆಲವು ಕಡೆಗಳಲ್ಲಿ ಮಾಡುತ್ತಾರೆ, ಎಲ್ಲಿ ಐದು ಲಕ್ಷ ರೂಪಾಯಿಗಳಿಗಿಂತಲೂ ಒಳಗಡೆ ಇದೆ, ಅದನ್ನು ಸಂಪೂರ್ಣವಾಗಿ ರದ್ದು ಮಾಡುವ ಕೆಲಸ ಕೂಡ ಆಗಿದೆ. ಏಕೆಂದರೆ 5ಲಕ್ಷ ರೂಪಾಯಿಗಳಲ್ಲಿ ಹೂಳು ಎತ್ತುವಂಥ ಕಾರ್ಯಕ್ರಮವು ಯಾವುದೇ ರೀತಿಯಲ್ಲಿ ಆಗುವುದಿಲ್ಲ. ಕೆಲವು ಕೆರೆಗಳಿಗೆ 10ರಿಂದ 20 ಲಕ್ಷ ರೂಪಾಯಿಗಳವರೆಗೂ ಬೇಕಾಗುತ್ತದೆ. ದೊಡ್ಡ ಕೆರೆಗಳಿಗೆ ಇನ್ನೂ ಜಾಸ್ತಿ ಹಣ ಬೇಕಾಗುತ್ತದೆ. ಆದ್ದರಿಂದ ಈ ವಿಚಾರದಲ್ಲಿ ಯೋಚನೆ ಮಾಡತಕ್ಕಂಥ ಸಂದರ್ಭದಲ್ಲಿ ಈಗಾಗಲೇ ವಿಶ್ವಬ್ಯಾಂಕ್‌ನವರು ಕೂಡ ಇದರ ಬಗ್ಗೆ ಚರ್ಚೆ ಮಾಡಿ ಹೂಳೆತ್ತುವ ಕೆಲಸವು ರೈತರ ಸಹಕಾರ ಇದ್ದರೆ ಮಾತ್ರ ಸಾಧ್ಯ ಎಂದು ಹೇಳಿದ್ದಾರೆ. ಈ ಕುರಿತು ಶೀಘ್ರಗತಿಯಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಮೊದಲು ತಾವುಗಳೆಲ್ಲರೂ ಒಟ್ಟಿಗೆ ಕುಳಿತು, ಚರ್ಚೆ ಮಾಡಿ, ಏನು ಮಾಡಬೇಕೆಂಬುದನ್ನು ನಿರ್ಣಯ ಮಾಡುವುದು ಸೂಕ್ತ ಎಂಬುದನ್ನು ಹೇಳಬಯಸುತ್ತೇನೆ.

ಶ್ರೀ ವೈ.ಕೆ. ರಾಮಯ್ಯ : ಸರಕಾರದ ಯೋಜನೆಗಳು ಕಾರ್ಯಗತವಾಗುವಲ್ಲಿ ಬಹಳ ವಿಳಂಬ ಆಗುತ್ತಾ ಇದೆ ಎಂಬುದು ನಮ್ಮೆಲ್ಲರ ಅನುಭವವಾಗಿದೆ. ಸರಕಾರದ ಯಾವುದೇ ಯೋಜನೆಗಳು ಕಾರ್ಯಗತವಾಗುತ್ತಿಲ್ಲ ಎಂಬ ವಿಚಾರವು ಇಲ್ಲಿ ಪ್ರಮುಖವಾದ ವಿಚಾರವಾಗಿದೆ. ಸಣ್ಣ ನೀರಾವರಿ ಇಲಾಖೆಯಲ್ಲಿ ತುಮಕೂರು ಜಿಲ್ಲೆಗೆ ಅದರಲ್ಲೂ ನನ್ನ ಕ್ಷೇತ್ರಕ್ಕೆ 12 ಕೋಟಿ ರೂಪಾಯಿಗಳ ಯೋಜನೆಯನ್ನು ತಯಾರು ಮಾಡಿದ್ದಾರೆ. ಮಾರ್ಚ್ 31 ಬಂದರೂ ಕೂಡ ಯೋಜನೆಯ ಅಂದಾಜನ್ನು ಕೂಡ ಸರಕಾರದವರು ಮಾಡಿಲ್ಲ. ಮಂತ್ರಿಗಳು ಬಂದು ಅದನ್ನು ಪರಿಶೀಲನೆ ಮಾಡಿದ್ದಾರೆ. ಆದರೂ ಏನೂ ಆಗಿಲ್ಲ. ಯಾವುದೇ ಯೋಜನೆಯು ಕನ್ನಡಿಯ ಗಂಟು ಆಗಬಾರದು. ಅದು ಕೈಯಲ್ಲಿರುವ ಗಂಟು ಆಗಬೇಕಾಗುತ್ತದೆ. ಯೋಜನೆಯಲ್ಲಿ ಕೋಟ್ಯಾಂತರ ರೂಪಾಯಿಗಳ ಮೊತ್ತವನ್ನು ತೋರಿಸಿ ನಮ್ಮ ಜನಗಳಿಗೆ ಮೋಸ ಮಾಡಿ ಅದನ್ನು ಮುಂದಿನ ವರ್ಷಕ್ಕೆ ತಳ್ಳುವಂಥ ಮೋಸದ ಜಾಲ ನಡೆದುಕೊಂಡು ಬಂದಿದೆ. ಈ ವರ್ಷ ಮಾನ್ಯ ಮಂತ್ರಿಗಳಿಗೂ ಗೊತ್ತಿದೆ. ನನ್ನ ಕ್ಷೇತ್ರಕ್ಕೆ 13 ಕೋಟಿ ರೂಪಾಯಿಗಳ ಯೋಜನೆಯನ್ನು ಪುಸ್ತಕದಲ್ಲಿ ತೋರಿಸಿದ ಕಳೆದ ಸರಕಾರ 13 ರೂಪಾಯಿಗಳ ಕೆಲಸವನ್ನು ಕೂಡ ಮಾಡಿಲ್ಲ. ನಾನು ಮಂತ್ರಿಗಳಿಗೆ ಕಾಗದವನ್ನು ಬರೆದದ್ದಾಯಿತು, ಅದನ್ನು ಪರಿಚಯಿಸಿ ಮಾನ್ಯ ಮುಖ್ಯಮಂತ್ರಿಗಳೂ ಕಾಗದವನ್ನು ಬರೆದದ್ದಾಯಿತು. ಆದರೂ ಕೂಡ ಇವೊತ್ತಿನವರೆಗೆ ಒಂದು ರೂಪಾಯಿನ ಕೆಲಸ ಸಣ್ಣ ನೀರಾವರಿ ಯೋಜನೆಯಡಿಯಲ್ಲಿ ಆಗಿಲ್ಲ. ಎಲ್ಲಾ ಮಂತ್ರಿಗಳ ದಂಡವನ್ನು ಕರೆದುಕೊಂಡು ಹೋಗಿ ಶಂಕುಸ್ಥಾಪನೆಯನ್ನು ಹಾಕಿಸಿದ್ದಾಯಿತು. ಆದರೂ ಆಗಿಲ್ಲ ಅಂದರೆ ಈ ಕೆಲಸವನ್ನು ಮಂತ್ರಿಗಳು, ಸರಕಾರದವರು ಮಾಡಿಕೊಂಡು ನಾನು ಏನು ಮಾಡಬೇಕೆಂದು ತಾವುಗಳು ಹೇಳಬೇಕು. ನಿಮ್ಮ ಅಧಿಕಾರಿಗಳ ಪಾದ ಪೂಜೆಯನ್ನು ಮಾಡಬೇಕೆ? ಅಥವಾ ಅವರು ಕತ್ತುಪಟ್ಟಿಯನ್ನು ಹಿಡಿದುಕೊಳ್ಳಬೇಕೆ? ಏನು ಮಾಡಬೇಕು ಹೇಳಿ? ನಮ್ಮಲ್ಲಿ ಯಾವ ಕೆಲಸಗಳೂ ಆಗುತ್ತಾ ಇಲ್ಲ. 13 ಕೋಟಿ ರೂಪಾಯಿಗಳ ಯೋಜನೆಯಲ್ಲಿ 13 ರೂಪಾಯಿಗಳ ಕೆಲಸವನ್ನು ಕೂಡ ಮಾಡಿಲ್ಲ ಎಂಬುದನ್ನು ಮಾನ್ಯ ಮಂತ್ರಿಗಳೇ ಬಂದು ನೋಡಿದ್ದಾರೆ.

MR. SPEAKER : The question does not pertain to Kunigal. Please ask a separate question. ನೀವು ಜನರಲ್ ಆಗಿ ಹೇಳಿ. ಕುಣಿಗಲ್ ತಾಲ್ಲೂಕಿನ ವಿಚಾರ ತಾವುಗಳು ಹೇಳುತ್ತಾ ಇದ್ದೀರಿ.

ಶ್ರೀ ವೈ.ಕೆ. ರಾಮಯ್ಯ : ಸಣ್ಣ ನೀರಾವರಿ ಇಲಾಖೆಯ ಕೆಲಸಕಾರ್ಯಗಳು ಸರಿಯಾಗಿ ನಡೆಯುತ್ತಾ ಇಲ್ಲ. ಯೋಜನೆಗಳು ಕಾರ್ಯರೂಪಕ್ಕೆ ಬರುತ್ತಾ ಇಲ್ಲ.

MR. SPEAKER : If you suddenly ask, how the Minister will answer. ನೀವು ಜನರಲ್ ಆಗಿ ವಿಷಯವನ್ನು ಹೇಳಿ.

ಶ್ರೀ ಅರಗ ಜ್ಞಾನೇಂದ್ರ : ಆ ಇಲಾಖೆಯಲ್ಲಿ ಸಿಬ್ಬಂದಿಯ ಕೊರತೆಯು ಇದೆ. ಆ ಇಲಾಖೆಯು ನಿಜವಾಗಿಯೂ ರೈತರಿಗೆ ನೆರವು ನೀಡುವಂಥ ಇಲಾಖೆ. ಅದನ್ನು ಸರಿಯಾಗಿ ವ್ಯವಸ್ಥೆ ಮಾಡಬೇಕು. ಮಾನ್ಯ ಸದಸ್ಯರು ಹೇಳುವುದು ಸರಿಯಾಗಿದೆ.

ಶ್ರೀ ವೈ.ಕೆ. ರಾಮಯ್ಯ : ವಿಳಂಬವಾದುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತಾರೆ?

ಶ್ರೀ ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಹಿರಿಯ ಸದಸ್ಯರಾಗಿರತಕ್ಕಂತಹ ವೈ.ಕೆ. ರಾಮಯ್ಯನವರು ಹೇಳಿದ ವಿಚಾರಗಳನ್ನು ಕೇಳಿದ್ದೇನೆ. ನಾವು ಇದಕ್ಕೋಸ್ಕರವಾಗಿಯೇ ನಾವು ತುಮಕೂರು ಜಿಲ್ಲೆಯ ಡಿ.ಸಿ. ಕಛೇರಿಯಲ್ಲಿ ಕುಳಿತುಕೊಂಡು ಸುಮಾರು ಹತ್ತು ಗಂಟೆಗಳ ಕಾಲ ಇದನ್ನು ರಿವ್ಯೂ ಮಾಡಿದ್ದೇವೆ. ಮಧ್ಯಾಹ್ನ 2 ಗಂಟೆಗೆ ನಾವೆಲ್ಲರೂ ಕುಳಿತುಕೊಂಡು ರಾತ್ರಿ ಒಂಭತ್ತು ಗಂಟೆಯವರೆಗೆ ಈ ಬಗ್ಗೆ ಚರ್ಚೆ ಮಾಡಿದ್ದೇವೆ. ಆ ಸಂದರ್ಭದಲ್ಲಿ ಅಧಿಕಾರಿಗಳು ಮತ್ತು ಸಂಬಂಧಪಟ್ಟವರು ಎಲ್ಲರೂ ಸೂಕ್ತ ರೀತಿಯಲ್ಲಿ ಕೆಲಸ ಮಾಡಿಲ್ಲ ಎಂಬುದನ್ನು ಅರ್ಥ ಮಾಡಿಕೊಂಡಿದ್ದೇವೆ. ಅದೇ ರೀತಿಯಲ್ಲಿ ಇಲಾಖಾ ವಿಚಾರಣೆಗೆ ಇದನ್ನು ಒಳಪಡಿಸಿದ್ದೇವೆ. ಏತಕ್ಕೋಸ್ಕರವಾಗಿ ಈ 13 ಕೋಟಿ ರೂಪಾಯಿಗಳ ಯೋಜನೆಯು ಸ್ಯಾಂಕ್ಷನ್ ಆಗಿದ್ದರೂ ಕೆಲಸಕಾರ್ಯಗಳು ಏತಕ್ಕಾಗಿ ನಡೆಯುತ್ತಿಲ್ಲ ಎಂದು ನೋಡಲು ಹುಲಿಯೂರುದುರ್ಗ ಕ್ಷೇತ್ರಕ್ಕೆ ಹೋಗಿ ನೋಡಿಕೊಂಡು ಬರಲು ಬೆಳಿಗ್ಗೆಯಿಂದ ಸಾಯಂಕಾಲದ ತನಕವೂ ಎಲ್ಲಾ ಕಾರ್ಯಕ್ರಮಗಳನ್ನು ಒಂದೊಂದಾಗಿ ರಿಜೆಕ್ಟ್ ಮಾಡುತ್ತಾ, ನಾವು ಮತ್ತು ವೈ.ಕೆ. ರಾಮಯ್ಯನವರು ಮತ್ತು ಇಂಜಿನಿಯರ್ಸ್‌ಗಳು ಹೋಗುತ್ತಿರತಕ್ಕಂಥ ಸಂದರ್ಭದಲ್ಲಿ ಅಲ್ಲಿ ಕೆಲವೊಂದು ಕೆಲಸಕಾರ್ಯಗಳು ಅರ್ಧಂಬರ್ಧವಾಗಿವೆ, ಕೆಲವೊಂದು ಕೆಲಸಕಾರ್ಯಗಳು ಪ್ರಾರಂಭವೇ ಆಗಿಲ್ಲ, ಎಂಬ ತರಹದಲ್ಲಿ ವಾದ ಬಂತು. ಅದಕ್ಕೆ ಈಗ ಏನು ಮಾಡಬೇಕೆಂಬ ವಾದವನ್ನು ತಾವು ಮುಂದಿಟ್ಟಿದ್ದೀರಿ. ಬರತಕ್ಕಂಥ ವರ್ಷದಲ್ಲಿ ನಾವು ಏನು ಮಾಡಬೇಕೆಂದು ನೋಡುತ್ತಿದ್ದೇವೆ. ಟಿಎಸಿ ಕ್ಲಿಯರೆನ್ಸ್ ಆಗತಕ್ಕಂಥಾದ್ದು ಇದ್ದಾವೆ, ಟಿಎಸಿ ಕ್ಲಿಯರೆನ್ಸ್‌ಗೆ ಇನ್ನೂ ಎಸ್ಟಿಮೇಟ್‌ಗಳನ್ನು ಕಳುಹಿಸದೇ ಇರತಕ್ಕಂಥ ಪರಿಸ್ಥಿತಿಯೂ ಇದೆ. ಇದನ್ನೆಲ್ಲಾ ನೋಡಿ ಇಂಜಿನಿಯರ್ಸ್ ಮೇಲೆ ನಾವು ಬಹಳ ಕಠಿಣವಾದ ಕ್ರಮವನ್ನು ತೆಗೆದುಕೊಂಡಿದ್ದೇವೆ. ಬರತಕ್ಕಂಥ 2000-2001ನೇ ಇಸವಿಯೊಳಗೆ ಯಾವ ಯಾವ ಕಾರ್ಯಕ್ರಮ ಯಾವ ಯಾವ ಹಂತದಲ್ಲಿ ಯಾವ ವೇಗದಲ್ಲಿ ಹೋಗಬೇಕು ಅದನ್ನು ತಕ್ಷಣ ತೆಗೆದುಕೊಂಡು ಯಾವುದೇ ಕೆಲಸಕಾರ್ಯಗಳು ಕುಂಠಿತವಾಗದ ರೀತಿಯಲ್ಲಿ ನೋಡಿಕೊಳ್ಳುತ್ತೇವೆ ಎಂಬ ಭರವಸೆಯನ್ನು ಮಾನ್ಯ ಹಿರಿಯ ಸದಸ್ಯರಿಗೆ ಕೊಡಬಯಸುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಈ ವಿಚಾರವಾಗಿ ಸನ್ಮಾನ್ಯ ಸಣ್ಣ ನೀರಾವರಿ ಸಚಿವರ ಜೊತೆಗೆ ಹಾಗೂ ಮಾನ್ಯ ಮುಖ್ಯಮಂತ್ರಿಯವರ ಜೊತೆಗೆ ಈ ಕುರಿತು ಮಾತನಾಡಿದ್ದೇನೆ. ಈ ಕೆಲಸಕಾರ್ಯಗಳಿಗೆ ಸಾವಿರಾರು ಕೋಟಿ ರೂಪಾಯಿಗಳ ಹಣದ ಅವಶ್ಯಕತೆ ಇದೆ. ಅಷ್ಟು ಹಣವನ್ನು ಒದಗಿಸಿಕೊಡುವ ಬಗ್ಗೆ ಯಾವುದೇ ಸರಕಾರ ಇದ್ದರೂ ಸಾಧ್ಯವಾಗಲಾರದು. ಆದ್ದರಿಂದ ಮಾನ್ಯ ಮಂತ್ರಿಗಳು ಕೂಡ ಹೇಳಿದ ಹಾಗೆ ರೈತರುಗಳನ್ನು ಇದರಲ್ಲಿ ತೊಡಗಿಸುವುದರ ಮೂಲಕ ಇದರ ಖರ್ಚು ವೆಚ್ಚಗಳನ್ನು ಕೇವಲ 20 ರಿಂದ 25 ಪರ್‌ಸೆಂಟ್‌ಗಳಷ್ಟು ಮಾತ್ರ ಮಾಡಿದರೆ ನೂರರಷ್ಟು ಕೆಲಸ ಆಗುವ ಸಾಧ್ಯತೆಗಳು ಇವೆ. ಆ ಕುರಿತು ಒಂದು ಸಭೆಯನ್ನು ಕರೆದು ಚರ್ಚಿಸಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳಿಕೊಂಡ ಮೇರೆಗೆ ಅವರು ಒಪ್ಪಿಗೆ ನೀಡಿದ್ದಾರೆ. ಆದ್ದರಿಂದ ತಾವುಗಳು ದಯವಿಟ್ಟು ಬಜೆಟ್ ಭಾಷಣ ಆದಮೇಲೆ ಒಂದು ಸಭೆಯನ್ನು ಕರೆದು ಈ

ಬಗ್ಗೆ ಆಳವಾಗಿ ವಿಚಾರವನ್ನು ಮಾಡುವ ವ್ಯವಸ್ಥೆ ಮಾಡಬೇಕು. ಬಯಲುಸೀಮೆ ಭಾಗದಲ್ಲಿ ನೀರಾವರಿಗೆ ಕೆರೆಗಳೇ ಪ್ರಾಮುಖ್ಯವಾಗಿರುವ ಕಾರಣದಿಂದಾಗಿ ಈ ಕೆಲಸಕ್ಕೆ ಪ್ರಥಮ ಆಧ್ಯತೆಯನ್ನು ಕೊಡಬೇಕಾದ ಅವಶ್ಯಕತೆಯು ಇದೆ. ಇದಕ್ಕಾಗಿ ತಾವುಗಳು ಸಭೆಯನ್ನು ಕರೆಯಬೇಕು. ಈ ಕೆಲಸಕಾರ್ಯಗಳಲ್ಲಿ ಖರ್ಚು ಕಡಿಮೆ ಮಾಡುವ ವಿಚಾರದಲ್ಲಿ ಬೇಕಾದಷ್ಟು ಅವಕಾಶಗಳಿವೆ. ಈ ಅವಕಾಶವನ್ನು ಮಾನ್ಯ ಮುಖ್ಯಮಂತ್ರಿಯವರು ಬಳಸಿಕೊಳ್ಳಬೇಕೆಂದು ವಿನಂತಿಸಿಕೊಂಡು ಆ ಕುರಿತು ಕ್ರಮ ಜರುಗಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಪಾಪಣ್ಣ : ಅಧ್ಯಕ್ಷರೇ ನಾಲೆಯಲ್ಲಿ ಹೂಳು ತೆಗೆಯುವ ವಿಷಯ ಬಂದಾಗ ಸುಮಾರು 650 ಕ್ಯುಸೆಕ್ಸ್ ನೀರು ಹರಿಯುವ ನಾಲೆಯಲ್ಲಿ ಹೂಳು ತೆಗೆದಿದ್ದೇವೆ ಎಂದು ಮಾನ್ಯ ಸಚಿವರ ಹತ್ತಿರ ಈಗಾಗಲೇ ದೂರು ಕೊಟ್ಟಿದ್ದೇವೆ.

ಅಧ್ಯಕ್ಷರು : ನಾಲೆ ವಿಷಯ ಬೇಡ್ರಿ. ಅದರ ಬಗ್ಗೆ ಪ್ರತ್ಯೇಕ ಪ್ರಶ್ನೆ ಕೇಳಿ.

ಶ್ರೀ ಎಸ್.ಎಸ್. ಪಾಟೀಲ್ : ಅಧ್ಯಕ್ಷರೇ, ಕೋಲಾರದ ಕೆರೆಗಳಲ್ಲಿ ಹೂಳು ತೆಗೆಯುವ ರೀತಿ ಇಡೀ ರಾಜ್ಯದಲ್ಲಿ ಮಾಡಬೇಕೆಂದು ಈಗಾಗಲೇ ಹಿರಿಯರು ಹೇಳಿದ್ದಾರೆ. ನಮ್ಮ ಸರ್ಕಾರ ಇದ್ದಾಗಲೂ ಅವರಿಗೆ ಹೇಳಿಕೊಳ್ಳುತ್ತಲೇ ಬಂದೆವು. ಉತ್ತರ ಕರ್ನಾಟಕದಲ್ಲಿ ಇದು ಆಗುವುದಿಲ್ಲ. ನಾವು ರೈತರು ತೆಗೆಯಲು ಆಗುವುದಿಲ್ಲ. ತೆಗೆಯದಿದ್ದರೆ ಹಾಗೇ ಉಳಿದುಬಿಡುತ್ತದೆ. ಹಾಗೆ ತೆಗೆದ ಮಣ್ಣು ನಮ್ಮ ಹೊಲಕ್ಕೆ ಉಪಯೋಗವೂ ಆಗುವುದಿಲ್ಲ, ಅದು ಕರಿ ಮಣ್ಣು. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಸರ್ಕಾರದ ಖರ್ಚಿನಿಂದಲೇ ಹೂಳು ತೆಗೆಯುವ ವ್ಯವಸ್ಥೆ ಮಾಡಿ.

ಅಧ್ಯಕ್ಷರು : ಬಹುಶಃ ನನಗೆ ಗೊತ್ತಿರುವ ಹಾಗೆ ಕೋಲಾರ, ಬಿಜಾಪುರ ಯಾವುದೇ ಜಿಲ್ಲೆ ಇರಬಹುದು, ಈ ಕೆರೆಗಳನ್ನು ಕಟ್ಟಿರುವುದು ವಿಜಯನಗರ ಸಾಮ್ರಾಜ್ಯದ ಕೃಷ್ಣದೇವರಾಯನ ಮತ್ತು ಚೋಳರಾಜರ ಕಾಲದಲ್ಲಿ. ಎಲ್ಲ ತುಂಬಿಹೋಗಿವೆ. ಈಗ ನೀರು ಬಂದರೂ ಕೆರೆ ತುಂಬಿದಹಾಗೆ ಇರುತ್ತದೆ ಅಷ್ಟೇ ವಾಸ್ತವವಾಗಿ ಎರಡು ಮೂರು ತಿಂಗಳೂ ನೀರು ಇರುವುದಿಲ್ಲ ಮಾನ್ಯ ಮುಖ್ಯಮಂತ್ರಿಗಳು ವಿಶ್ವಬ್ಯಾಂಕಿನಿಂದ 12 ಸಾವಿರ ಕೋಟಿ ರೂಪಾಯಿಗಳನ್ನು ತರುವ ಏರ್ಪಾಡು ಮಾಡುತ್ತೇವೆ ಅಂದಿದ್ದಾರೆ, ಬಹಳ ಸಂತೋಷ ಅದಕ್ಕೆ ವಂದನೆಗಳು. ಈ ಕಾರ್ಯಕ್ರಮದ ಬಗ್ಗೆ ಬೈರೇಗೌಡರು ಸಲಹೆ ನೀಡಿದಂತೆ ಒಂದು ಸಭೆ ಕರೆದು ಮಾಡಿದರೆ ಬಹಳ ಉತ್ತಮ, ಅವತ್ತು ನಾನೂ ಬರುತ್ತೇನೆ, ಬೇಕಾದರೆ ನನ್ನ ಸಲಹೆಗಳನ್ನು ಕೊಡುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ : ಅಧ್ಯಕ್ಷರೇ, ಕನ್ನಡಿಯೊಳಗಿನ ಗಂಟು, ಸಾಲದಲ್ಲೇ ಕಾರ್ಯಕ್ರಮಗಳನ್ನು ನಡೆಸಲಿಕ್ಕೆ ಈ ಸರ್ಕಾರ ಸಿದ್ಧ. ಸರ್ಕಾರದ ಕಾರ್ಯಕ್ರಮಗಳನ್ನು ಸಾಲದಲ್ಲೇ ನಡೆಸಬೇಕೆಂಬುದು. ನಮ್ಮ ರಾಜ್ಯದಲ್ಲಿ ಒಟ್ಟು 50 ಸಾವಿರ ಕೆರೆಗಳಿವೆ ಎಂಬ ಅಂದಾಜಿದೆ ಬೃಹತ್, ಸಣ್ಣ ನೀರಾವರಿ ಮತ್ತು ಜಿಲ್ಲಾಪಂಚಾಯಿತಿಗಳಡಿಯಲ್ಲಿರುವಂಥವು. ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿರುವ ಸಮಸ್ಯೆಯೇ ಬೇರೆ. ದಕ್ಷಿಣ ಕರ್ನಾಟಕದ ಸಮಸ್ಯೆಯೇ ಬೇರೆ ಮಲೆನಾಡು ಪ್ರದೇಶದಲ್ಲಿನ ಸಮಸ್ಯೆಯೇ

ಬೇರೆ. ಮಾನ್ಯ ಬೈರೇಗೌಡರು ಏನು ವಿಧಾನ ಅನುಸರಿಸಬೇಕೆಂದು ಹೇಳುತ್ತಿದ್ದಾರೆ ಅದು ಹಳೇ ಮೈಸೂರು ಭಾಗದಲ್ಲಿ ಅಪೇಕ್ಷಿತ ಕಾರ್ಯಕ್ರಮ ಹಾಗೇನೆ ಪಾಟೀಲರು ಆ ಭಾಗದಲ್ಲಿ ಕೆರೆ ಹೂಳನ್ನು ಉಪಯೋಗಿಸಲಿಕ್ಕೆ ಪರ್ಯಾಯವಾದಂಥ ಅವಕಾಶವಿಲ್ಲ ಎಂಬುದನ್ನೂ ನಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಮತ್ತು ಮಾನ್ಯ ಅಧ್ಯಕ್ಷರೇ ತಾವೇನು ಸೂಚನೆ ಕೊಟ್ಟಿದ್ದೀರಿ ಅದರ ಆಧಾರದ ಮೇಲೆ ಇದರ ಬಗ್ಗೆ ಅನುಭವ ಮತ್ತು ಆಸಕ್ತಿ ಇರುವವರ ಸಭೆಯನ್ನು ಅಧಿವೇಶನ ನಡೆಯುವ ಕಾಲದಲ್ಲಿ ಕರೆದು ಇದಕ್ಕೆ ಸೂಕ್ತವಾದ ಒಂದು ಒಮ್ಮತವನ್ನು ಪಡೆಯಲು ಏರ್ಪಾಡು ಮಾಡಿ ಈ ಕಾರ್ಯ ಮುಂದುವರಿಸೋಣ.

ಅಧ್ಯಕ್ಷರು : ಮುಂದಿನ ಪ್ರಶ್ನೆ ಕೃಷ್ಣಮೂರ್ತಿಯವರದು, ಸರ್ಕಾರದವರು ಒಂದು ತಿಂಗಳು ಸಮಯ ಕೇಳಿದ್ದಾರೆ, ಬಹಳ ಉತ್ತರ ಆಗುತ್ತದಂತೆ, ಮುಂದಿನ ವಾರದೊಳಗೆ ಉತ್ತರಿಸುವಂತೆ ಸಂಬಂಧಿಸಿದ ಸಚಿವರನ್ನು ಕೇಳುತ್ತೇನೆ.

ಬೆಂಗಳೂರು ಗ್ರಾಮಾಂತರ ಬಡವರಿಗೆ ಹಸಿರು ಪಡಿತರ ಚೀಟಿ ವಿತರಣೆ

97 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅನೇಕ ಬಡವರಿಗೆ ಹಸಿರು ಕಾರ್ಡು ವಿತರಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಯಾವ ಯಾವ ತಾಲ್ಲೂಕಿನ ಎಷ್ಟು ಜನಕ್ಕೆ ಹಸಿರು ಪಡಿತರ ಚೀಟಿ ವಿತರಿಸಿಲ್ಲ?

ಇ) ವಿತರಣೆ ಮಾಡಲಿಲ್ಲದವರಿಗೆ ಹಸಿರು ಪಡಿತರ ಚೀಟಿ ವಿತರಿಸಲು ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳೇನು?

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು) :

ಅ) ಹೌದು.

ಆ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಹಸಿರು ಪಡಿತರ ಚೀಟಿಗಳಿಗಾಗಿ ಕೋರಿ ಬಂದ ಅರ್ಜಿಗಳು ಈ ಕೆಳಕಂಡಂತೆ ಬಾಕಿ ಇವೆ.

(ತಾಲ್ಲೂಕುವಾರು)

1.	ನೆಲಮಂಗಲ	-	1058
2.	ದೊಡ್ಡಬಳ್ಳಾಪುರ	-	920
3.	ಹೊಸಕೋಟೆ	-	1233
4.	ಕನಕಪುರ	-	9648